



**ಸಮಗ್ರ ಮಾಹಿತಿ**

'ವಿಶ್ವಕಪ್ ಸಮರ' ಬಿ.ಎಂ. ಹನೀಫ್ (ಸುಧಾ ಜೂನ್ 19) ಮುಖಪುಟ ಲೇಖನ ಸಮಗ್ರ ಮಾಹಿತಿ ನೀಡಿದೆ. ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್ ಫುಟ್ ಬಾಲ್ ವಿಶೇಷಗಳ ಬಗ್ಗೆ ಲೇಖನ ವಿವರವಾಗಿ ತಿಳಿಸಿದೆ.

-ಎಂ.ಜಿ. ರಾಮಚಂದ್ರ, ಮಂಡಗಳಲೆ, ವೈ.ಜಿ. ನರಸಿಂಹನ್, ಶಿವಮೊಗ್ಗ, ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಬಿ.ಎನ್. ಸೊಲ್ಲಾಪುರೆ, ಕಮಲನಗರ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು, ಹೇಮಾ ಸುಬ್ರಹ್ಮಣ್ಯ, ಹಾಲ್ಮುತ್ತೂರು

**ಚಿಂತನಾರ್ಹ**

'ಪರಿಸರ ಕಾಳಜಿಗಾಗಿ ಎಲ್ಲರ ದನಿ' (ನಿಮ್ಮೊಡನೆ) ಲೇಖನ ಚಿಂತನಾರ್ಹ. ಎಂದಿಗಿಂತ ಇಂದು ಪರಿಸರ ಕಾಳಜಿ ಮುಖ್ಯವಾಗಿದೆ. ನೀರು, ಆಹಾರ, ಗಾಳಿ, ಮತ್ತೆಲ್ಲವೂ ತಮ್ಮ ಗುಣಮಟ್ಟ ಕಳೆದುಕೊಂಡು ಮಾನವನ ಆರೋಗ್ಯಕ್ಕೆ ಕುತ್ತು ತರುತ್ತವೆ. ಪರಿಸರದ ಬಗ್ಗೆ ಪ್ರತಿಯೊಬ್ಬರೂ ಚಿಂತಿಸುವುದು ಇಂದಿನ ಅಗತ್ಯ.

-ಎ.ಕೆ. ಪಟ್ಟಾಭಿ, ಬೆಂಗಳೂರು

**ವ್ಯವಸ್ಥೆಗೆ ಹಿಡಿದ ಕನ್ನಡಿ**

'ವಿಚಾರ ಲಹರಿ' ಅಂಕಣದಲ್ಲಿನ 'ಪ್ರಜಾಪ್ರಭುತ್ವದ ನವೀಕರಣ' ಲೇಖನ ಇಂದಿನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

-ಪದ್ಮಾ ಕೃಷ್ಣಮೂರ್ತಿ, ತುಮಕೂರು, ಕೊಹಿಮ, ಬಸರಕೋಡು

**ಅಚ್ಚರಿ ಮೂಡಿಸಿತು**

'ಕಾಂಗರೂ ವಿಸ್ಮಯ ಲೋಕ' ಡಾ. ಅರುಣ್ ಇಸ್ಲೂರ್ ಅವರ ಲೇಖನ ಅಚ್ಚರಿ ಮೂಡಿಸಿತು. ಚಿತ್ರಗಳು ಕಣ್ಮನ ಸೆಳೆದವು.

-ರವೀಂದ್ರನಾಥ. ಶಿ. ಯಡಹಳ್ಳಿ, ಬಾಗಲಕೋಟೆ, ಪುಷ್ಪಾವತಿ, ಬೆಂಗಳೂರು

**ಅಪರೂಪದ ಮಾಹಿತಿ**

ಲೇಖನ ಅತ್ಯುತ್ತಮವಾಗಿ ಮೂಡಿಬಂದಿದೆ. 'ಕಾಂಗರೂ' ಎಂಬ ಹೆಸರು ಬರಲು ಕಾರಣ; ಪ್ರಾಯಕ್ಕೆ ಬಂದ ಹೆಣ್ಣು ಕಾಂಗರೂಗಳು ಗರ್ಭ ಧರಿಸುವ ಬಗ್ಗೆ ಮಾಹಿತಿ; ಅವುಗಳ ಎರಡು ವಿಧದ ಹಾಲು ಉತ್ಪಾದನೆ ಹಾಗೂ ಮಾಂಸದ ಪೌಷ್ಟಿಕಾಂಶದ ವಿವರಗಳು ಅಪರೂಪದ್ದಾಗಿದ್ದು, ಹಿಂದೆ ಎಲ್ಲಿಯೂ ಕೇಳಿರಲಿಲ್ಲ. ಲೇಖಕರಿಗೆ ಮತ್ತು 'ಸುಧಾ' ಪತ್ರಿಕೆಗೆ ಧನ್ಯವಾದಗಳು.

-ಆಶಾ ಅಪ್ರಮೇಯ, ದಾವಣಗೆರೆ

**ವಿಭಿನ್ನ ಖಾದ್ಯ**

ಕಾಂಗರೂಗಳ ನಾಡಿನ ಸೊಬಗನ್ನು, ಕಾಂಗರೂಗಳ ವಿಭಿನ್ನ ಖಾದ್ಯಗಳನ್ನು ಪರಿಚಯಿಸಿದ ಚಿತ್ರ–ಬರಹ ಗಮನ ಸೆಳೆದಿದೆ.

-ನಿತ್ಯಾ ಎಸ್., ಮೂಡಬಿದಿರೆ

**ಕಣ್ಮನ ಸೆಳೆಯಿತು**

ಪ್ರವಾಸ ಲೇಖನ ಎಸ್. ಶ್ರೀನಾಥ್‌ರವರ 'ಗೋಪಾಲಸ್ವಾಮಿ ಬೆಟ್ಟದ ಮೇಲೆ' ಆಕರ್ಷಕ ವರ್ಣ ಪಾರದರ್ಶಿಕೆ ಮತ್ತು ಬರಹ ಕಣ್ಮನ ಸೆಳೆಯಿತು.

-ನೆ.ಲ.ರಾಂ., ಬೆಂಗಳೂರು

**ನಮ್ಮ ಜಿಲ್ಲೆಯದ್ದು**

'ಗೋಪಾಲಸ್ವಾಮಿ ಬೆಟ್ಟದ ಮೇಲೆ...' ಪ್ರವಾಸ ಲೇಖನ ಆಹ್ಲಾದಕರ ಚಿತ್ರಗಳೊಡನೆ ನಮ್ಮ ಜಿಲ್ಲೆಯದ್ದು ಎಂಬ ಹೆಮ್ಮೆ ಮೂಡಿಸಿತು.

-ಶೀಲಾ ಸತ್ಯೇಂದ್ರ ಸ್ವಾಮಿ, ಚಾಮರಾಜನಗರ

**ವಾರಾಂತ್ಯಕ್ಕೆ ಸೂಕ್ತ**

ಚಾರಣಿಗರಿಗೆ ಹಾಗೂ ವಾರಾಂತ್ಯದಲ್ಲಿ 2 ದಿನ ಕಳೆಯುವ ಪ್ರವಾಸ ಪ್ರಿಯರಿಗೆ ಯೋಗ್ಯವಾದ ಹಾಗೂ ಯಾವುದೇ ಅಪಾಯವಿಲ್ಲದ ಸುಂದರ ತಾಣ ಈ ಬೆಟ್ಟ. ಊಟೋಪಚಾರದ್ದೇ, ತಿಂಡಿ ತಿನಿಸುಗಳದ್ದೇ ಒಂದು ಸಮಸ್ಯೆ.

-ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

**ಸೀರೆ ಲೇಖನ ಚೆನ್ನಾಗಿದೆ**

ಫ್ಯಾಷನ್ ಅಂಕಣದಲ್ಲಿ 'ಸೀರೆಯ ಜಗವೇ ಸೋಜಿಗ' ವಿಶಾಲಕ್ಷ್ಮಿ ಅಕ್ಕಿ ಅವರ ಲೇಖನ ಚೆನ್ನಾಗಿದೆ.

-ಮಹಾವೀರ ಕಾಸರ, ಶಿವಮೊಗ್ಗ

**ಪೂರಕ ಮಾಹಿತಿ**

ಸೀರೆ ಲೇಖನಕ್ಕೆ ಪೂರಕವಾಗಿ ಒಂದು ಮಾಹಿತಿ. ಈಗ ಐದೂವರೆ ಮೀಟರುಗಳ ಸೀರೆ ಮತ್ತು ಕೆಲವೊಂದು ವಿನಾಯಿತಿ ಹೊರತುಪಡಿಸಿದರೆ ಎಲ್ಲ ಕಡೆ ಒಂದೇ ಶೈಲಿಯಲ್ಲಿ ಉಡುತ್ತಾರೆ. ಸುಮಾರು 70–80 ವರ್ಷಗಳ ಹಿಂದೆ ಹೀಗಿರಲಿಲ್ಲ. ಒಂದೊಂದು ಪ್ರದೇಶದಲ್ಲಿ, ಒಂದೊಂದು ಸಮುದಾಯದಲ್ಲಿ ಒಂದೊಂದು ರೀತಿಯಲ್ಲಿ ಸೀರೆ ಉಡುತ್ತಿದ್ದರು. ಸಾಮಾನ್ಯವಾಗಿ ಇವುಗಳೆಲ್ಲ 9 ಗಜ ಅಥವಾ 18 ಮೊಳದ ಸೀರೆಗಳು. ಅವರು ಉಡುತ್ತಿದ್ದ ಸೀರೆಯ ಶೈಲಿಯಿಂದಲೇ ಅವರು ಯಾವ ಪ್ರದೇಶದವರೆಂದೋ, ಯಾವ ಜಾತಿ/ ಒಳ ಪಂಗಡದವರೆಂದೋ ಗುರುತಿಸಬಹುದಿತ್ತು.

-ಕೆ. ವೆಂಕಟರಾಜು, ಚಾಮರಾಜನಗರ

**'ಒಗ್ಗರಣೆ' ಸೊಗಸಾಗಿದೆ**

'ಒಗ್ಗರಣೆಯ ಪರಿಮಳಕೆ ಮನಸೋತು' ಅಲೇಖ ರ ಲೇಖನ ಸೊಗಸಾಗಿದೆ. ಪ್ರಕಾಶ್ ರೈ ನಿರ್ದೇಶನದ 'ನಾನೂ ನನ್ನ ಕನಸು' ಸಿನಿಮಾ ನೋಡಿ ಖುಷಿಪಟ್ಟಿದ್ದ ನಾನು 'ಒಗ್ಗರಣೆ' ಸಿನಿಮಾ ನೋಡಿಯೂ ಖುಷಿಪಟ್ಟೆ. ಪ್ರಕಾಶ್ ರೈ ಇನ್ನಷ್ಟು ಕನ್ನಡ ಚಿತ್ರಗಳನ್ನು ನಿರ್ದೇಶಿಸಲಿ.

-ಎಸ್ವೆನ್ಕೆ, ಕಡೂರು

**ಎರಡು ಸಲ ಓದಿ ಸಂಭ್ರಮಿಸಿದೆ**

ಬುಧವಾರ 'ಒಗ್ಗರಣೆ' ಚಿತ್ರ ವೀಕ್ಷಿಸಿ ಸಂಭ್ರಮಿಸಿ ಬಂದ ನಮಗೆ ಗುರುವಾರ ಬೆಳಿಗ್ಗೆಯೇ ಈ ಕುರಿತ ಲೇಖನ ಓದಲು ಲಭ್ಯವಾದದ್ದು ಕಾಕತಾಳೀಯವೇ ಸರಿ. ಅಲೇಖ ಅವರು ಮತ್ತೊಮ್ಮೆ ನಮಗೆ ಚಿತ್ರ ತೋರಿಸಿಬಿಟ್ಟರು. ಲೇಖನ ಚೆನ್ನಾಗಿದೆ. ಎರಡೆರಡು ಸಾರಿ ಓದಿ ಆನಂದಪಟ್ಟೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

**ಖುಷಿ ನೀಡಿದ ಕಥೆ**


ಸಿ.ಟಿ. ಶಾಂತರಾಜ್‌ರವರ 'ಕೆಂಡದ ಸೆರಗಲ್ಲಿ ಹೂವೊಂದು ನಕ್ಕಾಗ' ಕಥೆ ಬಹಳ ದಿನಗಳ ನಂತರ ಓದಿದ ಖುಷಿ ನೀಡಿದ ಕಥೆಯಾಗಿದೆ. ಅನಿರೀಕ್ಷಿತ ಅಂತ್ಯ ಗೋವರ್ಧನರಾಯರ ಬಗ್ಗೆ ಹೆಮ್ಮೆ ಮೂಡಿಸಿತು. ಕಥೆಯ ಶೀರ್ಷಿಕೆ ಕೂಡ ಅರ್ಥಪೂರ್ಣವಾಗಿದೆ. ಲೇಖಕರಿಗೆ ಧನ್ಯವಾದಗಳು.

-ಸುನಂದಾ ಅ. ಹಾಲಭಾವಿ, ಬೆಳಗಾವಿ

**ಪೂರ್ಣ ಯಶಸ್ಸು**

ಸಹಜವಾಗಿ ಮೂಡಿಬಂದು ಓದುಗನನ್ನು ತನ್ಮಯನನ್ನಾಗಿಸುತ್ತದೆ. ಕತೆಗಾರರ ಪೂರ್ಣ ಯಶಸ್ಸನ್ನು ನಾವು ಕಾಣಬಹುದು.

-ಎನ್.ಎಸ್. ಆನಂದ್, ಎನ್. ವಸಂತಾ, ಸಮಯ್, ಶ್ರೀನಾಥ್, ಸ್ನೇಹಾ, ಬೆಂಗಳೂರು, ಎಚ್.ಆನಂದಕುಮಾರ್, ಚಿತ್ರದುರ್ಗ, ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ, ಬಿ.ಎಸ್.ರಮೇಶ್, ಮಣಿಪಾಲ, ರಾಜಶೇಖರಗೌಡ, ಕೊಟ್ಟೂರು, ಎಲ್.ಸುಮಂತ್, ಬೆಂಗಳೂರು



ವಶೀಕರಣ ಸ್ಪೆಷಲಿಸ್ಟ್

ಶ್ರೀಯುತ ಮಂಜುನಾಥ ಗುರೂಜಿಯವರಿಂದ

ಜನವಶೀಕರಣ, ಲಕ್ಷ್ಮೀ ವಶೀಕರಣ, ಸ್ತ್ರೀ ವಶೀಕರಣ, ಪುರುಷ ವಶೀಕರಣ, ಶತ್ರು ವಶೀಕರಣ, ಇನ್ನಿತರ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ಫೋನಿನ ಮೂಲಕ ಶಾಶ್ವತ ಪರಿಹಾರ. ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ. ಒಮ್ಮೆ ಕರೆಮಾಡಿ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ವಿಶೇಷ ಸೂಚನೆ: ನಮ್ಮಲ್ಲಿ ಕೇಳುವ ನಿಮ್ಮೆಲ್ಲಾ ವಿಷಯಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮಂಜುನಾಥ ಗುರೂಜಿ – 9886999747